	33	ಅಪ್ಪಾನಮ್ಮನೆ, ಭಾರತ ಮಾತಾ ಕ್ವಾಟ್ರಸ್, ಕೆ ಇ ಬಿ, ಮುಖ್ಯ ರಸ್ತೆ, ಪಿಳ್ಳಣ್ಣನ ಗಾರ್ಡನ್, ಬೆಂಗಳೂರು
	34	ಬದುಕು, ಹರಿನಗರ, ಕೊತ್ತೂರು ಮುಖ್ಯರಸ್ತೆ, ಜೆ.ಪಿ.ನಗರ 2ನೇ ಹಂತ ಬೆಂಗಳೂರು
	35	ಹರಿಹರಸುತ ಕಲಾ ಮಂಡಳಿ, ಕೊಳಚೆ ನಿರ್ಮೂಲನಾ ಪ್ರದೇಶ, ಲಕ್ಷ್ಮೀದೇವಿನಗರ, ಲಗ್ಗೆರೆ, ಪೀಣ್ಯ, ಬೆಂಗಳೂರು
	36	ಗಿಲ್‌ಗಾಲ್ ಟ್ರಸ್ಟ್-2, ಕುವೆಂಪುನಗರ, ಜಾಲಹಳ್ಳಿ, ಅಂಗನವಾಡಿ ಕೇಮಧ್ರದ ಹತ್ತಿರ ಬೆಂಗಳೂರು
	37	ಆಶಾಕಿರಣ ಯುವತಿ ಮಂಡಳಿ ಪ್ರೈಮರಿ ಸ್ಕೂಲ್ ಹತ್ತಿರ ಮಾದಪಟ್ಟಣ, ಆನೇಕಲ್ ತಾಲ್ಲೂಕು, ಬೆಂಗಳೂರು
	38	ಟ್ರಸ್ಟ್‌ಫಾರ್ ರೂರಲ್ ಅಪ್ಲಿಫಟ್‌ಮೆಂಟ್ ಸ್ಟಡೀಸ್ ಟ್ರಸ್ಟ್-2, ಅರಕೆರೆ, ಬೆಂಗಳೂರು.

ಬೆಂಗಳೂರು ನಗರದಲ್ಲಿರುವ ಸರ್ಕಾರಿ / ಖಾಸಗಿ ಆಸ್ಪತ್ರೆಗಳು

902 (970) ಶ್ರೀ ನರೇಂದ್ರ ಬಾಬು ಸಿ.ಎ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ/ ಖಾಸಗಿ ಆಸ್ಪತ್ರೆಗಳೆಷ್ಟು (ವಿವರವಾದ ಮಾಹಿತಿ ನೀಡುವುದು);

ಆ) ಸರ್ಕಾರಿ ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ಉಪಕರಣಗಳು, ಶಸ್ತ್ರಚಿಕಿತ್ಸೆ ಘಟಕಗಳು ಪೂರೈಸಲಾಗಿದೆಯೇ;

ಇ) ಹಾಗಿದ್ದಲ್ಲಿ ಯಾವ ಯಾವ ಉಪಕರಣಗಳು ಆಸ್ಪತ್ರೆಯಲ್ಲಿ ಅಳವಡಿಸಿದೆ. ಅವುಗಳಿಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು (ವಿವರ ನೀಡುವುದು);

ಈ) ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ದಾಖಲಾಗಿರುವವರಿಗೆ ಚಿಕಿತ್ಸೆಗಾಗಿ ಹೆಚ್ಚಿನ ಮೊತ್ತವನ್ನು ನೀಡುವಂತೆ ತಿಳಿಸಿ ಬಡ ಜನರನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಸರ್ಕಾರಿ ಆಸ್ಪತ್ರೆಗಳನ್ನು ಸುಸಜ್ಜಿತವಾಗಿ ಉನ್ನತೀಕರಿಸಲು ಸರ್ಕಾರ ತೆಗೆದಕೊಂಡಿರುವ ಕ್ರಮವೇನು (ವಿವರವಾದ ಮಾಹಿತಿ ನೀಡುವುದು);

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ 6 ಸರ್ಕಾರಿ ಆಸ್ಪತ್ರೆಗಳ ವಿವರಗಳು ಕೆಳಕಂಡಂತಿವೆ:

1) ಕೆ.ಸಿ. ಜನರಲ್ ಆಸ್ಪತ್ರೆ,
2) ಜಯನಗರ ಸಾರ್ವಜನಿಕ ಆಸ್ಪತ್ರೆ
3) ಇಂದಿರಾನಗರ ಸಾರ್ವಜನಿಕ ಆಸ್ಪತ್ರೆ (ಟಿ.ಬಿ. & ಸಿ.ಡಿ. ಆಸ್ಪತ್ರೆ),
4) ಸಾಂಕ್ರಾಮಿಕ ರೋಗಗಳ ಆಸ್ಪತ್ರೆ
5) ಕುಷ್ಠರೋಗ ಆಸ್ಪತ್ರೆ
6) ಘೋಷಾ ಆಸ್ಪತ್ರೆ,

ಖಾಸಗಿ ಆಸ್ಪತ್ರೆಗಳು ಯಾವುದೇ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುವ ಪರಿಪಾಠ ಜಾರಿಯಲ್ಲಿದ್ದಿಲ್ಲ. ಈಗ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಹಾಗೂ ನಿಯಮಗಳನ್ನು ದಿನಾಂಕ: 10–11–2009 ರಿಂದ ಜಾರಿಗೆ ತರಲಾಗಿದೆ. ಈ ಸಂಬಂಧ ಕೆಲವು ಖಾಸಗಿ ಸಂಸ್ಥೆಗಳಿಂದ ನೊಂದಣಿಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅವುಗಳು ನೊಂದಣಿ ಪ್ರಾಧಿಕಾರದ ಪರಿಶೀಲನೆಯಲ್ಲಿವೆ. ಸದರಿ ಸಂಸ್ಥೆಗಳು ನೋಂದಣಿಯಾದ ನಂತರವೇ ಖಾಸಗಿ ಆಸ್ಪತ್ರೆಗಳ ಕುರಿತಂತೆ ಮಾಹಿತಿ ಲಭ್ಯವಾಗುತ್ತದೆ. ಉಳಿದಂತೆ ಕೆಲವು ಖಾಸಗಿ ಸಂಸ್ಥೆಗಳಿಂದ ನೊಂದಣಿ ಮಾಡಿಕೊಳ್ಳಲು ಅವಕಾಶ ವಿಸ್ತರಿಸಬೇಕೆಂದು ಕೋರಿದ್ದು, ಈ ಬಗ್ಗೆ ಕಾಯ್ದೆಗೆ ತಿದ್ದುಪಡಿ ಮಾಡಬೇಕಾದ ಕಾರಣ ವಿಷಯವು ಪರಿಶೀಲನೆಯಲ್ಲಿದೆ.

ಆ) ಮತ್ತು ಇ) ಅವಶ್ಯ ಇರುವ ಕಡೆ ಶಸ್ತ್ರಚಿಕಿತ್ಸೆ ಘಟಕಗಳನ್ನು ಒದಗಿಸಲಾಗಿದೆ.

ಮುಂದುವರಿದು ಕೆಳಕಂಡ ಸರ್ಕಾರಿ ಆಸ್ಪತ್ರೆಗಳಲ್ಲಿ ಇ.ಸಿ.ಜಿ., ಕ್ಷ-ಕಿರಣ ತಂತ್ರಜ್ಞ, ಅಲ್ಟ್ರಾಸೌಂಡ್ ಮತ್ತು ಡಯಾಲಿಸಿಸ್ ಯಂತ್ರ ಇತ್ಯಾದಿ ಆಧುನಿಕ ಯಂತ್ರಗಳನ್ನು ಪೂರೈಸಲಾಗಿದೆ. ಒಟ್ಟಾರೆ ಉಪಕರಣಗಳಿಗೆ ಖರ್ಚು ಮಾಡಿದ ಮೊತ್ತದ ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಆಸ್ಪತ್ರೆಯ ವಿವರ	ಒಟ್ಟು ಮೊತ್ತ
1.	ಕೆ.ಸಿ. ಜನರಲ್ ಆಸ್ಪತ್ರೆ	17614460.00
2.	ಜಯನಗರ ಸಾರ್ವಜನಿಕ ಆಸ್ಪತ್ರೆ	6500000.00
3.	ಇಂದಿರಾನಗರ ಸಾರ್ವಜನಿಕ ಆಸ್ಪತ್ರೆ	337000.00
4.	ಸಾಂಕ್ರಾಮಿಕ ರೋಗಗಳ ಆಸ್ಪತ್ರೆ	500000.00
5.	ಕುಷ್ಠರೋಗ ಆಸ್ಪತ್ರೆ	465000.00
6.	ಘೋಷಾ ಆಸ್ಪತ್ರೆ	687000.00

ಈ) ಖಾಸಗಿ ಆಸ್ಪತ್ರೆಗಳು ವಿವಿಧ ಚಿಕಿತ್ಸೆಗಾಗಿ ರೋಗಿಗಳಿಗೆ ವಿಧಿಸುತ್ತಿರುವ ದರ ಕುರಿತಂತೆ ಸರ್ಕಾರಕ್ಕೆ ವರದಿ ಮಾಡುವ ಪರಿಪಾಠವಿಲ್ಲದ ಕಾರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಈ ಸರ್ಕಾರಿ ಆಸ್ಪತ್ರೆಗಳಲ್ಲಿ ಇ.ಸಿ.ಜಿ., ಕ್ಷ-ಕಿರಣ ತಂತ್ರಜ್ಞ, ಅಲ್ಟ್ರಾ ಸೌಂಡ್ ಮತ್ತು ಡಯಾಲಿಸಿಸ್ ಯಂತ್ರ ಇತ್ಯಾದಿ ಆಧುನಿಕ ಯಂತ್ರಗಳನ್ನು ಪೂರೈಸಿ ಸುಸಜ್ಜಿತಗೊಳಿಸಲಾಗಿದೆ.

ಬೆಂಗಳೂರು ನಗರದಲ್ಲಿ ಅಲ್ಪಸಂಖ್ಯಾತರಿಗೆ ಕೈಗೊಂಡಿರುವ ಯೋಜನೆಗಳು

903 (971) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಅಲ್ಪಸಂಖ್ಯಾತರಿಗೆ ಯಾವ ಯವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಹಾಗೂ ಅವರಿಗೆ ನೀಡಿರುವ ಸಾಲ ಸೌಲಭ್ಯಗಳು ಎಷ್ಟು (ವಿವರ ನೀಡುವುದು);